# ಬಸವೇಶ್ವರ ಆಸ್ಪತ್ರೆಯಲ್ಲಿ ಯಶಸ್ವಿ ಶಸ್ತ್ರಚಿಕಿತ್ಸೆ

**ಚಿತ್ರದುರ್ಗ, ಜೂ. 26** - ಇತ್ತೀಚೆಗೆ ಹಲ್ಲು ನೋವಿನಿಂದ ಚಿಕಿತ್ಸೆಗೆ ದಾಖಲಾಗಿದ್ದ ವ್ಯಕ್ತಿಗೆ ವಸಡಿನ ಕೆಳಭಾಗದ ಹಲ್ಲಿನ ಹತ್ತಿರ ತೀರ ಅಪರೂಪ ಎನ್ನಬಹುದಾದ ಬ್ಲಾಕ್ ಫಂಗಸ್‌ನ್ನು ಎಸ್.ಜೆ.ಎಂ. ದಂತ ಮಹಾವಿದ್ಯಾಲಯದವರು ಪತ್ತೆ ಹಚ್ಚಿ ಹೆಚ್ಚಿನ ಚಿಕಿತ್ಸೆಗಾಗಿ ಬಸವೇಶ್ವರ ವೈದ್ಯಕೀಯ ಆಸ್ಪತ್ರೆಗೆ ದಾಖಲು ಮಾಡಿದ್ದರು. ಬಸವೇಶ್ವರ ವೈದ್ಯಕೀಯ ಕಾಲೇಜಿನ ಡೀನ್ ಡಾ|| ಪ್ರಶಾಂತ್ ಮತ್ತು ವೈದ್ಯಕೀಯ ಅಧೀಕ್ಷಕ ಡಾ|| ಪಾಲಾಕ್ಷಪ್ಪ ಅವರ ಸೂಕ್ತ ಮಾರ್ಗದರ್ಶನದೊಂದಿಗೆ ಡಾ| ನಾಗರಾಜಪ್ಪ, ಡಾ| ಮಧುಮತಿ, ಡಾ| ನರಸಿಂಹಮೂರ್ತಿ, ಡಾ|| ಆರ್. ಗೌರಮ್ಮ, ಡಾ|| ಮೇಘ, ಡಾ|| ತಿಮ್ಮಾರೆಡ್ಡಿ, ಡಾ|| ಆಕಾಶ್ ಮೊದಲಾದ ವೈದ್ಯರ ತಂಡದವರು ಚಿಕಿತ್ಸೆ ಮಾಡಿ ರೋಗಿಯನ್ನು ಅಪಾಯದಿಂದ ದೂರ ಮಾಡಿದ್ದಾರೆ. ಇವರ ಸೇವೆಯನ್ನು ಪ್ರಶಂಸಿಸಿರುವ ಡಾ. ಶಿವಮೂರ್ತಿ ಮುರುಘಾ ಶರಣರು ವೈದ್ಯರ ತಂಡವನ್ನು ಅಭಿನಂದಿಸಿದ್ದಾರೆ.

